ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:667/2025

ಚಾಸಾ:2 ಪ್ರಾಸಾ:2

ದಿನಾಂಕ: 20.11.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಚೇತನಾ |
| ಗಂಡನ ಹೆಸರು | : | ಮಹೇಶ ಶೇರಿಗಾರ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಉಳ್ಳೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಆರೋಪಿತರ ಪರಿಚಯವಿದೆ. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿರುವುದಿಲ್ಲ. ಆರೋಪಿಗಳು ಚಾಸಾ-1ರವರನ್ನು ಅಡ್ಡಗಟ್ಟಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಜೀವ ಬೆದರಿಕೆ ಹಾಕಿಲ್ಲ, ಹಲ್ಲೆ ಮಾಡಿಲ್ಲ. ನಾನು ಘಟನೆಯ ಪ್ರತ್ಯಕ್ಷದರ್ಶಿ ಅಲ್ಲ. ನಾನು ಯಾವುದೇ ಘಟನೆ ನೋಡಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ದಿ: 15-03-2025 ರಂದು ಬೆಳಗ್ಗೆ 11 ಗಂಟೆಗೆ ಚಾಸಾ-1ರವರು ಮನೆಯ ಬಳಿ ರಸ್ತೆಯಲ್ಲಿ ನಿಂತು ಬೇಲಿಯಲ್ಲಿರುವ ಅಕೇಶಿಯಾ ಮರದ ಗೆಲ್ಲು ಕಡಿಯುತ್ತಿರುವಾಗ 1ನೇ ಆರೋಪಿ ಆತನನ್ನು ಹಿಂದಿನಿಂದ ಬಂದು ಅಡ್ಡಗಟ್ಟಿ ತಡೆದು ನಿಲ್ಲಿಸಿ, ತಳ್ಳಿದ್ದರಿಂದ ಚಾಸಾ-1ರವರು ಕವಚಿ ಬಿದ್ದಿದ್ದು, ಅವಾಚ್ಯ ಶಬ್ದಗಳಿಂದ ನಿಂಧಿಸಿ ನೀನೇನು ಕರೆಂಟು ಹಾಕಲು ತಕರಾರು ಮಾಡುವುದು, ನಿನಗೆ ಬಹಳ ಸೊಕ್ಕು ಬಂದಿದೆ ಎಂದು ಚಾಸಾ-1ರವರ ಸೊಂಟಕ್ಕೆ ತುಳಿದಿರುತ್ತಾನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು, ಚಾಸಾ-3 ಮತ್ತು 4 ರವರು ಬಂದು ಹೊಡೆಯದಂತೆ ತಡೆದಾಗ ಚಾಸಾ-1ರವರನ್ನು ಉದ್ದೇಶಿಸಿ 1ನೇ ಆರೋಪಿ ಈವತ್ತು

ನೀನು ಬಚವ್ ಆದಿ, ನಿನ್ನನ್ನು ಕೊಲ್ಲದೆ ಬಿಡುವುದಿಲ್ಲ ನೋಡು ಎಂದು ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಅಲ್ಲಿಯೇ ನಿಂತಿದ್ದ 2ನೇ ಆರೋಪಿ ಚಾಸಾ-1ರವರಿಗೆ ಹೊಡಿ ಬಿಡಬೇಡ ಎಂದು ಅವಾಚ್ಯ ಶಬ್ದಗಳಿಂದ ನಿಂಧಿಸಿದಾಗ ಆಗ ನಾನು , ಚಾಸಾ-3 ಮತ್ತು 4ರವರು 2ನೇ ಆರೋಪಿತನಲ್ಲಿ ಚಾಸಾ-1ರವರಿಗೆ ಯಾಕೆ ಹೊಡೆದಿದ್ದು ಎಂದು ವಿಚಾರಿಸಿದಾಗ 2ನೇ ಆರೋಪಿ ಅವಾಚ್ಯ ಶಬ್ದಗಳಿಂದ ನಮಗೂ ಬೈದು ನೀವು ಯಾರು ಕೇಳಲು ಎಂದು ಚಾಸಾ-3 ರವರ ಕೈ ಹಿಡಿದು ಎಳೆದಿರುತ್ತಾನೆ ಎಂದರೆ ಸರಿಯಲ್ಲ. ಆಗ ನಾನು ತಪ್ಪಿಸಲು ಬಂದಾಗ ನನ್ನನ್ನು ತಳ್ಳಿ ಅಲ್ಲಿಂದ ಹೊರಟು ಹೋಗಿರುತ್ತಾನೆ ಎಂದರೆ ಸರಿಯಲ್ಲ. ನಂತರ ಚಾಸಾ-1ರವರನ್ನು ಮನೆಗೆ ಕರೆದುಕೊಂಡು ಹೋಗಿದ್ದು, ಹಲ್ಲೆಯ ಪರಿಣಾಮ ಚಾಸಾ-1ರವರಿಗೆ ಬೆನ್ನು ನೋವು ಉಲ್ಬಣಗೊಂಡು ದಿಃ 17-03-2025 ರಂದು ಚಾಸಾ-1ರವರನ್ನು ನಾನು ಮತ್ತು ಚಾಸಾ-3 ರವರು ಸೇರಿ ಕುಂದಾಪುರ ಸರಕಾರಿ ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ದಿಃ 19-03-2025 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

ಈಗ ನಾವು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾನು ಪ್ರಕರಣದ ಪ್ರತ್ಯಕ್ಷದರ್ಶಿಯಾಗಿ ಘಟನೆಯನ್ನು ನೋಡಿದ್ದರೂ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**